ಕರ್ನೂಲು, ಕಡಪಾ, ಅನಂತಪುರ ಅಂತ ಎಲ್ಲ ಕಡೆ ಹೋಗಿ ಅವನಿಗಾಗಿ ಹುಡುಕಾಡಿದೆ. ಪತ್ತೆ ಆಗಲಿಲ್ಲ. ಅವನನ್ನು ಹುಡುಕಲು ನಿಮ್ಮ ಸಹಾಯ ಕೇಳೋಕೆ ಬಂದಿದ್ದೀನಿ. ನಿಮಗೆ ರಾಯಲಸೀಮಾ ಏರಿಯಾದಲ್ಲಿ ಒಳ್ಳೇ ಕಾಂಟ್ಯಾಕ್ಟ್ ಇದೆ ಅಂತ ಗೊತ್ತಾಯ್ತು' ಎಂದು ಯಾಚಿಸುವ ಧ್ವನಿಯಲ್ಲಿ ಹೇಳಿ ಅವರ ಮುಖ ನೋಡಿದಳು.

ಮತ್ತೆ ಅವಳೇ, 'ಸರ್, ನಮ್ಮದು ಕೊಡಗು. ಎಂ.ಎ. ಮುಗಿದ ಕೂಡಲೇ ನನ್ನ ಮದುವೆ ಆಯ್ತು. ಗಂಡ ನಮ್ಮ ದೂರದ ಸಂಬಂಧಿಕರು. ಕೊಡಗಲ್ಲಿ ನನ್ನ ಗಂಡಂದು ಇನ್ನೂರು ಎಕರೆ ಭೂಮಿ ಇದೆ. ಕರ್ನಾಟಕ ಮತ್ತು ಕೇರಳದ ಗಡಿಯಲ್ಲಿ. ನೂರಿಪ್ಪತ್ತು ಎಕರೆ ನಮ್ಮ ಸ್ಟೇಟ್‌ನಲ್ಲಿ, ಉಳಿದದ್ದು ಕೇರಳದಲ್ಲಿ. ಕಾಫಿ, ರಬ್ಬರ್, ಅನಾನಸು, ಮೆಣಸು, ಏಲಕ್ಕಿ ಎಲ್ಲಾ ಬೆಳೀತೀವಿ. ಹಣಕಾಸಿನ ಸಮಸ್ಯೆ ನಮಗಿಲ್ಲ. ಒಬ್ಬನೇ ಮಗ, ಪಿಯುಸಿಯಲ್ಲಿ ಎರಡು ಸಲ ಫೇಲಾಗಿ ಆಮೇಲೆ ಪಾಸು ಮಾಡಿದ. ನಮ್ಮ ಜತೆ ಇದ್ದರೆ ಸರಿಯಾಗಿ ಓದಲ್ಲ ಅಂತ ಅವನನ್ನು ಮದನಪಲ್ಲಿಯಲ್ಲಿ ಗಂಡನ ಪರಿಚಯದವರೊಬ್ಬರು ನಡೆಸೊ ಕಾಲೇಜಿಗೆ ಸೇರಿಸಿದ್ವಿ. ಅಲ್ಲಿ ಚೆನ್ನಾಗಿ ಓದ್ತಾ ಇದ್ದ. ಡಿಗ್ರಿ ಮುಗಿದ ಮೇಲೆ ಅವನಿಗೊಂದು ಮದುವೆ ಮಾಡಿದರೆ ನಮ್ಮ ಜವಾಬ್ದಾರಿ ಮುಗಿಯುತ್ತೆ ಅಂದ್‌ಕಂಡಿದ್ದೆ. ಈಗ ಅವನೇ ಮನೆ ಬಿಟ್ಟು ಹೋದ' ಎನ್ನುತ್ತ ಅವರ ಮುಖ ನೋಡಿದಳು.

'ಸರ್, ನಿಮ್ಮದೊಂದು ಆರ್ಟಿಕಲ್ ಕಳೆದ ತಿಂಗಳು ಫಾರ್ ಮಿಲಿಯನ್ಸ್ ವೀಕ್ಲಿಯಲ್ಲಿ ಪ್ರಕಟವಾಗಿತ್ತಲ್ಲ. ಅದರಲ್ಲಿ ಆಂಧ್ರದ ರೆಫೆರೆನ್ಸ್ ಜಾಸ್ತಿ ಇದೆ. ಅದನ್ನು ಓದಿದ ಮೇಲೆ ಭೂರಹಿತ ಕಾರ್ಮಿಕರು ಮತ್ತು ಬಡಜನರ ಬಗ್ಗೆ ನಿಮಗಿರೋ ಕನ್ಸರ್ನ್ ಎಷ್ಟು ಅನ್ನೋದು ಗೊತ್ತಾಯ್ತು. ನನ್ನ ಸೀನಿಯರ್ ಒಬ್ಬಳು ಸಾರಾ ಅಂತ ಇದ್ದಳು. ನಿಮ್ಮ ಸ್ಟೂಡೆಂಟ್, ಅವಳೀಗ ಕೃಷ್ಣದೇವರಾಯ ಯೂನಿವರ್ಸಿಟಿಯಲ್ಲಿ ರೀಡರ್ ಆಗಿದ್ದಾಳೆ. ರಾಯಲಸೀಮಾ ಏರಿಯಾದಲ್ಲಿ ಇರೋ ರೈಟರ್ಸ್, ಜರ್ನಲಿಸ್ಟ್‌ಗಳೆಲ್ಲ ನಿಮಗೆ ಗೊತ್ತಂತೆ. ಅವಳೇ ಹೇಳಿದ್ಳು. ನನ್ನ ಮಗನ್ನ ಹುಡುಕೋಕೆ ನಿಮ್ಮ ಹೆಲ್ಪ್ ಬೇಕು ಸರ್. ಹದಿನೈದು ದಿನಗಳ ಹಿಂದೆ ನಿಮ್ಮನ್ನು ನೋಡಬೇಕು ಅಂತ ಕ್ಯಾಂಪಸ್ಸಿಗೆ ಬಂದಿದ್ದೆ. ನೀವು ದಾಂತೇವಾಡಕ್ಕೆ ಹೋಗಿದ್ದೀರಿ ಅಂತ ಡಿಪಾರ್ಟ್‌ಮೆಂಟ್‌ನಲ್ಲಿ ಹೇಳಿದರು. ನಿಮ್ಮ ಮನೆ ಅಡ್ರಸ್ ತಗಂಡು ಪತ್ರ ಬರೆದಿದ್ದೆ... ಅದು ನಿಮಗೆ ಸಿಕ್ತೊ, ಇಲ್ಲವೊ ಗೊತ್ತಾಗಲಿಲ್ಲ' ಎನ್ನುತ್ತ ಅವರ ಪ್ರತಿಕ್ರಿಯೆಗೆ ಕಾದಳು.

'ನಿಮ್ಮ ಮಗ ಮನೆ ಬಿಟ್ಟು ಹೋಗಿದ್ದೇಕೆ?' ಎನ್ನುತ್ತ ಪ್ರೊಫೆಸರ್ ಅವಳತ್ತ ನೋಡಿದರು. ಅವಳು ಉತ್ತರಿಸಲಿಲ್ಲ. 'ಓಕೆ, ಲೀವಿಟ್. ಹೇಳೋಕೆ ಇಷ್ಟ ಇಲ್ಲದಿದ್ರೆ ಬೇಡ. ಕಾರಣ ಗೊತ್ತಾದರೆ ಹುಡುಕೋದು ಸುಲಭ' ಎನ್ನುತ್ತ ಮತ್ತೆ ಅವಳ ಕಡೆ ನೋಡಿದರು.

'ಸರ್, ಮಗನಿಗೆ ಇನ್ನೂ ಇಪ್ಪತ್ತೆರಡು ವರ್ಷ. ಅಜಯ್ ಅಂತ ಅವನ ಹೆಸರು. ಎಂಟ್ಹತ್ತು ತಿಂಗಳ ಹಿಂದೆ ಒಂದ್ ದಿನ ಅವನು ಮದನಪಲ್ಲಿಯಿಂದ ಮನೆಗೆ ಬಂದ. ನಾನು ಮುಂದಕ್ಕೆ ಓದಲ್ಲ ಅಂತ ಹೇಳಿದ. ನಾನು ಕಾರಣ ಕೇಳಲಿಲ್ಲ. ಓದಿ, ಕೆಲಸ ಹಿಡಿದು ಜೀವನ ಮಾಡುವಂಥ ಸ್ಥಿತಿ ಅವನಿಗಿಲ್ಲ ಅನ್ನೋ ಕಾರಣಕ್ಕೆ ನಾನೂ ಹೆಚ್ಚು ವಿಚಾರಿಸಲಿಲ್ಲ. ಅವರಪ್ಪನೂ ಕೇಳಲಿಲ್ಲ. ಆದರೆ ಅವನ ವರ್ತನೆ ಸಂಪೂರ್ಣ ಬದಲಾಗಿದೆ ಅನ್ನೋದು ಮೂರ್ನಾಲ್ಕು ದಿನಗಳಲ್ಲಿ ನಮ್ಮ ಗಮನಕ್ಕೆ ಬಂತು.

ಅಜಯ್ ತುಂಬಾ ಜೋವಿಯಲ್. ಗಿಟಾರ್ ನುಡಿಸ್ತಾ ಇದ್ದ. ನಮ್ಮ ಅಕ್ಕಪಕ್ಕದ ಎಸ್ಟೇಟ್‌ಗಳ ಅವನದೇ ಪ್ರಾಯದ ಹುಡುಗರ ಜತೆ ಖುಷಿ ಖುಷಿಯಾಗಿ ಓಡಾಡಿಕೊಂಡಿದ್ದ. ಜೀಪು ಓಡಿಸೋದು ಅವನ ಖಯಾಲಿ. ಮದನಪಲ್ಲಿಗೆ ಹೋದ ಮೇಲೆ ತುಂಬಾ ಬದಲಾಗಿ ಬಿಟ್ಟ ಅನ್ಸುತ್ತೆ. ಅಲ್ಲಿ ಏನು ಮಾಡಿಕೊಂಡನೋ ಗೊತ್ತಿಲ್ಲ. ಲವ್ವು ಗಿವ್ವು ಅಂತ ತಲೆಕೆಡಿಸಿಕೊಂಡು ಮನೆಗೆ ಬಂದಿರಬಹುದು ಅಂತ ಗೆಸ್ ಮಾಡಿದ್ದೆ. ಸ್ವಲ್ಪ ದಿನ ಬಿಟ್ಟು ಅವನನ್ನೇ ಕೇಳಿದೆ. ಅಂಥದ್ದೇನೂ ಇಲ್ಲ. ರಾತ್ರಿ ತುಂಬಾ ಹೊತ್ತಿನ